ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಅದರ ಬಗ್ಗೆ ಸ್ಪೆಸಿಫಿಕ್ ಆಗಿ ಕೊಟ್ಟಿದ್ದೇನೆ. ಉತ್ತರ ನೋಡಿದರೆ ಸಾರಾಯಿಯಲ್ಲಿ ಕೂಡ ಕಲಬೆರಕೆ ಬರುತ್ತಿದೆಯೇನೋ ಎಂದು ಅನಿಸುತ್ತಿದೆ. ಹುಬ್ಬಳ್ಳಿಯಲ್ಲಿ ಎರಡು ಕಡೆ 25ನೇ ತಾರೀಖು 17 ಲಕ್ಷ ರೂಪಾಯಿಯಷ್ಟು ಹಾಲಿನ ಪುಡಿಯನ್ನು ಗೋದಾನ್‌ನಲ್ಲಿ ಸೀಜ್ ಮಾಡಿದ್ದಾರೆ ಎನ್ನುವಂತಹ ಅಂಕಿ ಅಂಶಗಳು ಬಂದಿವೆ. ಅವರನ್ನು ಸಧ್ಯಕ್ಕೆ ಅರೆಸ್ಟ್ ಮಾಡಿ ಬಿಡುಗಡೆ ಮಾಡಿದ್ದಾರೆ.

ಅಧ್ಯಕ್ಷರು : ಈಗ ಚರ್ಚೆ ಬೇಡ; ಈ ವಿಷಯವನ್ನು ಇವತ್ತು ಪತ್ರಿಕೆಯಲ್ಲಿ ಬಂದಿರುವುದನ್ನು ಆಧಾರವಾಗಿ ಇಟ್ಟುಕೊಂಡು ತಾವು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ ಎಂದು. ಊಳಿದ ಎಲ್ಲಾ ವಿವರಗಳನ್ನು ಮಾನ್ಯ ಉಪ ಮಖ್ಯಮಂತ್ರಿಯವರಿಗೆ ತಾವು ಕಳುಹಿಸಿಕೊಡಿ. ನೀವು ಈಗ ಈ ವಿಷಯವನ್ನು ಚರ್ಚೆಗೆ ತೆಗೆದುಕೊಂಡರೆ ನಿಗದಿತವಾದಂತಹ ನಮ್ಮ ಕೆಲಸ ಏನಿದೆ ಅದು ನಿಂತು ಹೋಗುತ್ತದೆ. ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ನಡುಗಡ್ಡೆಯ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿದಿರಿ. ತಾವು ಪ್ರಾರಂಭ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ಎಂದು ತಾವು ಹೇಳಿದ್ದೀರಿ. ಸಂತೋಷ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ತಾವು ನಮ್ಮ ಆಡಳಿತ ಪಕ್ಷದ ಕಡೆಗೆ ಅವಕಾಶವನ್ನೇ ಕೊಡತ್ತಿಲ್ಲ.

ಅಧ್ಯಕ್ಷರು : ಸರ್ಕಾರವನ್ನೇ ನಿಮ್ಮ ಕಡೆಗೆ ಕೊಟ್ಟಿದ್ದೇವೆ.

ಶ್ರೀ ಕೆ.ಎನ್. ನಾಗೇಗೌಡ : ನಾವು ಇನ್ನು ರಾಜ್ಯಪಾಲರ ಭಾಷಣಕ್ಕೆ ಬಂದಿಲ್ಲ. ನಾವು ಈಗ ಶೂನ್ಯ ವೇಳೆಯಲ್ಲಿ ಇದ್ದೇವೆ, ತಾವು ಲೇಟಾಗಿ ಬಂದಿದ್ದೀರಿ.

3 ರಾಯಚೂರು ಹತ್ತಿರದ ಗಡಿಭಾಗದಲ್ಲಿ ಆಂಧ್ರದವರು ಇಂದಿರಾ ಪ್ರಿಯದರ್ಶಿನಿ ಎಂಬ ಅಣೆಕಟ್ಟು ಕಟ್ಟುರುವುದು

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ರಾಯಚೂರು ಹತ್ತಿರದಲ್ಲಿ ಗಡಿ ಭಾಗದಲ್ಲಿ ಆಂಧ್ರದವರು ಇಂದಿರಾ ಪ್ರಿಯದರ್ಶಿನಿ ಎಂಬ ಅಣೆಕಟ್ಟನ್ನು ಸುಮಾರು 10 ವರ್ಷದಿಂದ ಕಟ್ಟುವುದಕ್ಕೆ ಪ್ರಾರಂಭ ಮಾಡಿ. ಅದು ಈಗ ಮುಗಿಯುವ ಹಂತದಲ್ಲಿದೆ. ನಮ್ಮ ಕರ್ನಾಟಕ ರಾಜ್ಯದ ಅನೇಕ ಭಾಗಗಳು ಇದರಲ್ಲಿ ಮುಳುಗಡೆ ಆಗತಕ್ಕಂಥಾದ್ದು ಸತ್ಯ. ಇದು ಬಹಳ ವಾಸ್ತವ ಸ್ಥಿತಿ. ಈ ಮುಳುಗಡೆ ಆಗತಕ್ಕಂಥ ಪ್ರದೇಶಗಳು ದ್ವೀಪಗಳು ನಡುಗಡ್ಡೆಗಳು ; ಸುಮಾರು ಒಂಡೂವರೆ ಸಾವಿರ ಎಕರೆ ಪ್ರದೇಶ ನಮ್ಮ ಪ್ರದೇಶ ಇದರಿಂದ ಮುಳುಗಡೆಯಾಗುತ್ತದೆ. ಸುಮಾರು ಐನೂರು ಅಥವಾ ಆರು ನೂರಕ್ಕೂ ಹೆಚ್ಚು ಸಂಸಾರಗಳು ಈ ಒಂದು ವ್ಯವಸ್ಥೆಯಲ್ಲಿ ಮುಳುಗತಕ್ಕಂಥ ಪರಿಸ್ಥಿತಿ ಇದೆ. ಮತ್ತು ಆ ಪ್ರದೇಶದ ಒಳ್ಳೆಯ ಸೌಂದರ್ಯವಂತಹ ಒಂದು ಒಂದು ಸುಂದರವಾದಂತಹ ವಾತಾವರಣ, ನೈಸರ್ಗಿಕವಾಗಿ ನಿರ್ಮಾಣವಾಗಿರತಕ್ಕಂಥಾದ್ದು. ಈ ಪ್ರದೇಶ ಮುಳುಗಡೆ ಆಗದೇ ಇರುವುದಕ್ಕೆ ಆಂಧ್ರ ಸರ್ಕಾರ 3 ಕೋಟಿ ರೂಪಾಯಿಯನ್ನು ಅದರ ಸುತ್ತ ಗೋಡೆ ಕಟ್ಟಿ ಗೋಡೆ ನಿರ್ಮಾಣ ಮಾಡುವುದಕ್ಕೆ ಕೊಡುತ್ತೇವೆ ಎಂದು ಹಿಂದೆ ಹೇಳಿದ್ದು ಉಂಟು. ಅದರ ಬಗ್ಗೆ ಕರ್ನಾಟಕ ಸರ್ಕಾರ ಇದುವರೆಗೂ ಯಾವ ಗಮನವನ್ನು ಹರಿಸಿಲ್ಲ. ಈಗ ಮತ್ತೆ ತರಾತರಿಯಲ್ಲಿ ಇಂದಿರಾ ಪ್ರಿಯದರ್ಶಿನಿ ಜಲಾಶಯ ಪ್ರಾರಂಭವಾದರೆ ನಮ್ಮ ಭಾಗದ್ದು ಮುಳುಗುತ್ತದೆ. ಈಗ ನಮ್ಮ ಹಿತವನ್ನು ಕಾಪಾಡುವುದಕ್ಕೆ ರಾಜ್ಯ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ? ಇದು ಬಹಳ ಅತ್ಯಂತ ಪ್ರಮುಖವಾದಂತಹ ಪ್ರಶ್ನೆ. ಮತ್ತು ಆ ಬಗ್ಗೆ ಈಗಾಗಲೇ ನಮ್ಮ ರಾಯಚೂರಿನ ಪ್ರಜಾವಾಣಿ ವರದಿಗಾರರು ಸವಿಸ್ತಾರವಾಗಿ "ಆಂಧ್ರದ ಅಣೆಕಟ್ಟಿಗೆ

ರಾಜ್ಯದ ರೈತರ ಹಿತಬಲಿ" ಎಂದು ಹೇಳಿ ಒಂದು ವಸ್ತು ಸ್ಥಿತಿ ಇಟ್ಟಿದ್ದಾರೆ. ಮತ್ತು ಅದು ವಸ್ತು ಸ್ಥಿತಿಯೂ ಹೌದು. ಮತ್ತು ಸರ್ಕಾರಕ್ಕೆ ಇದರ ಮಾಹಿತಿ ಗೊತ್ತಿರತಕ್ಕಂಥಾದ್ದು. ಈ ಬಗ್ಗೆ ತಾವು ಒಂದೇ ನಿಮಿಷದಲ್ಲಿ ನಮ್ಮ ರೈತರ ಹಿತವನ್ನು ಕಾಪಾಡುತ್ತೇವೆ ಎಂದು ಹೇಳುವ ಬದಲು ನಿಮ್ಮ ಬಳಿ ಈ ಬಗ್ಗೆ ಏನೇನು ಅಂಕಿಅಂಶಗಳು ಇವೆ ಹಾಗೂ ಆಂಧ್ರದವರ ಜೊತೆಯಲ್ಲಿ ಮಾತನಾಡಿರತಕ್ಕಂಥ ವಿಚಾರಗಳು ಏನು ಎಂಬುದನ್ನು ಸ್ಪಷ್ಟವಾಗಿ ಬೇಕಾಗಿದೆ.

ಆಂಧ್ರದವರು ಮತ್ತು ತಮಿಳುನಾಡಿನವರು ಕರ್ನಾಟಕದವರನ್ನು ಗುಲಾಮರಂತೆ ಕಾಣುತ್ತಿದ್ದಾರೆ. ಅವರ ಇಚ್ಛೆ ಬಂದಹಾಗೆ ಅವರವರ ರಾಜ್ಯದಲ್ಲಿ ಅಣೆಕಟ್ಟುಗಳನ್ನು ಕಟ್ಟಿಕೊಂಡು ಹೋಗುತ್ತಿದ್ದಾರೆ. ಅವರ ಇಚ್ಛೆಯಂತೆ ನಡೆಯುತ್ತಿದ್ದಾರೆ. ತಮಗೆ ಗೊತ್ತಿರುವ ಹಾಗೆ ತೆಲುಗು ಗಂಗಾ, ತಮಿಳುನಾಡಿಗೆ ಕುಡಿಯುವ ನೀರಿಗೆ ಪ್ರಾರಂಭ ಮಾಡಿ ಈಗ ನೀರಾವರಿಗೆ ಹೋಗಿದ್ದಾರೆ. ಇದಕ್ಕೆ ಕಾರಣ ಯಾರು? ಈ ಬಗ್ಗೆ ಕರ್ನಾಟಕ ಸರ್ಕಾರದ ಪ್ರತಿಭಟನೆ ಏನೂ ಇಲ್ಲ. ತೆಲಗುಗಂಗಾ ಸಂಪೂರ್ಣವಾಗಿ ನಡೆಯುತ್ತಿದೆ. ಮತ್ತೆ ತೆಲಗುಗಂಗಾ ಉದ್ಘಾಟನೆ ಮಾಡಿದಂತಹ ಶ್ರೀ ಎನ್.ಟಿ. ರಾಮರಾವ್‌ರವರು ಅಲ್ಲಿ ಮುಖ್ಯಮಂತ್ರಿಗಳು ಆಗಿದ್ದಾರೆ. ನಮ್ಮ ಹಿತವನ್ನು ಕಾಪಾಡುವವರು ಯಾರು? ಈಗ ನಮ್ಮ ಉಪಮುಖ್ಯಮಂತ್ರಿಯವರಿಗೂ ನೀರಾವರಿಯ ಬಗ್ಗೆ ಅಪಾರವಾದ ಕಾಳಜಿ ಇದೆ. ಇವತ್ತು ನಮ್ಮ ಹಿತಕ್ಕೆ ಬಲಿಯಾಗುವಂತಹ ಪರಿಸ್ಥಿತಿ ಈಗ ರಾಯಚೂರಿಗೆ ಹತ್ತಿರದಲ್ಲಿರುವಂತಹ ಗಡಿಪ್ರದೇಶದಲ್ಲಿ ಆಗತಕ್ಕಂಥ ಅಪಾಯದ ಬಗ್ಗೆ ತಮ್ಮಲ್ಲಿ ವಿವರಗಳು ಇವೆ. ತಾವು ಯಾವ ರೀತಿ ಇದನ್ನು ರಕ್ಷಣೆ ಮಾಡುತ್ತೀರಿ ಎಂಬುದನ್ನು ಸವಿಸ್ತಾರವಾಗಿ ಹೇಳಬೇಕು. ಇದರ ಬಗ್ಗೆ ಮಾತುಕತೆಗೆ ತಾವು ಏನಾದರೂ ಆಂಧ್ರಪ್ರದೇಶಕ್ಕೆ ಹೋಗುತ್ತೀರಾ? ಅಲ್ಲಿನ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತುಕತೆ ನಡೆಸಿ ತಕ್ಷಣ ಇದನ್ನು ನಿಲ್ಲಿಸಲು ಕ್ರಮ ಕೈಗೊಳ್ಳುತ್ತೀರಾ? ನಮ್ಮ ರೈತರ ಹಿತವನ್ನು ರಕ್ಷಿಸಲು ಏನೇನು ಮಾಡಿದ್ದೀರಿ ಎಂಬುದನ್ನು ಹೇಳದರು. ನಾನು ಇದರ ಬಗ್ಗೆ ಸವಿಸ್ತಾರವಾದಂತಹ ಉತ್ತರವನ್ನು ನಿಮ್ಮಿಂದ ಬಯಸುತ್ತೇನೆ. ಏಕೆಂದರೆ ನೀವು ಉತ್ತರವನ್ನು ತೀರ ಮೂರು ಗಂಟೆ ಕೊಡುತ್ತೀರಿ, ಇಲ್ಲ ಒಂದೇ ನಿಮಿಷದಲ್ಲಿ ಮುಗಿಸಿಬಿಡುತ್ತೀರಿ.

ಶ್ರೀ ಸಿದ್ದರಾಮಯ್ಯ : ತಾವು ಎಷ್ಟು ಹೊತ್ತು ಉತ್ತರ ಬೇಕೆಂದು ಸೂಚಿಸಿಬಿಟ್ಟರೆ ಅಷ್ಟುಹೊತ್ತಿನಲ್ಲಿ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನಿನ್ನೆ ಶ್ರೀ ನಾಗೇಗೌಡರು ತಮ್ಮ ಪೀಠದಲ್ಲಿ ಕುಳಿತಿದ್ದರು. ನಾವೆಲ್ಲಾ ಒಂದೇ ಗರಡಿಯಲ್ಲಿದ್ದಂತಹ ಜನ. ಮಾನ್ಯ ಪಟೇಲ್‌ರವರು ಸುದೀರ್ಘವಾಗಿ ಒಂದೂವರೆ ಗಂಟೆಗಳ ಕಾಲ ಉತ್ತರ ಕೊಟ್ಟಿದ್ದರಿಂದ ಬಹಳ ಸಮಯ ಹೋಯಿತು. ಅದರಿಂದ ನಷ್ಟವಾಯಿತು. ನಾನು ಸಭಾತ್ಯಾಗ ಮಾಡುವುದಕ್ಕೆ ತಯಾರಾಗಿದ್ದೆ. ಅವರೇ ಸಭಾತ್ಯಾಗ ಮಾಡಿ ಆ ಕಡೆ ಹೋಗಿದ್ದುದು ನನಗೆ ಬಹಳ ನೋವಾಯಿತು. ಆದುದರಿಂದ ನೀವು ನಮಗೆ ರಕ್ಷಣೆ ಕೊಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿ ಇದು ಗುರುತರವಾದ ಮತ್ತು ಗಂಭೀರವಾದ ಪ್ರಶ್ನೆ. ಈ ಬಗ್ಗೆ ತಾವು ಸ್ಪಷ್ಟವಾಗಿ ಹೇಳಬೇಕು.

ಅಧ್ಯಕ್ಷರು : ತಾವು ಅತ್ಯಂತ ಸಮರ್ಪಕವಾದ, ಸಮಾಧಾನವಾದಂತಹ, ರೀತಿಯಲ್ಲಿ ಉತ್ತರ ಕೊಡಬೇಕು.

ಶ್ರೀ ಜೆ.ಹೆಚ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಅತ್ಯಂತ ಸಮರ್ಪಕವಾದ, ಸಮಾಧಾನವಾದ, ಸಕಾರಣವಾದಂತಹ ಒಂದು ಮಾಹಿತಿಯನ್ನು ತಕ್ಷಣ ತರಿಸಿಕೊಂಡು ಇದೇ ದಿವಸ ಸದನದಲ್ಲಿ ಅವರಿಗೆ ವಿವರಗಳನ್ನು ಕೊಡುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ರಾಜ್ಯದ ಬಗ್ಗೆ ನಾಡುನುಡಿಯ ಬಗ್ಗೆ ಕಳಕಳಿ ಇದೆ ಎನ್ನುವುದು

ನನಗೆ ಗೊತ್ತು. ಅದಕ್ಕೊಸ್ಕರ ಅವರು ಹೋರಾಟ ಮಾಡುತ್ತಿದ್ದಾರೆ. ಈ ಸರ್ಕಾರದ ವತಿಯಿಂದ ನಾವು ಯಾವುದೇ ಒಂದು ಅಂಶದಲ್ಲಿ ಯಾರ ಪವರ್‌ಗೂ, ಯಾರ ಪ್ರಭಾವಕ್ಕೂ ಒಳಗಾಗದೇ ನಾವು ನಮ್ಮ ಹಿತವನ್ನು ರಕ್ಷಣೆ ಮಾಡಿಕೊಳ್ಳುತ್ತೇವೆ. ಅದು ಆಂಧ್ರಪ್ರದೇಶ ಇರಬಹುದು, ಮಹಾರಾಷ್ಟ್ರವಿರಬಹುದು, ತಮಿಳುನಾಡು ಇರಬಹುದು. ಕರ್ನಾಟಕ ನೆಲ, ಜಲ, ನಾಡು ನುಡಿ ಇವುಗಳನ್ನು ರಕ್ಷಣೆ ಮಾಡುವುದರಲ್ಲಿ ಏಕಸ್ಮಾತ್ ನಾವು ತಪ್ಪಿದ್ದಲ್ಲಿ ತಾವು ಯಾವಾಗಲೂ ನಮ್ಮನ್ನು ಎಚ್ಚರಿಸಬಹುದು. ನಾವು ಆ ಬಗ್ಗೆ ಯಾವುದೇ ದಾರಿ ತಪ್ಪಿ ಹೋಗುವುದಿಲ್ಲ ಎಂಬ ಮಾತನ್ನು ಹೇಳುತ್ತೇನೆ. ಇದೇ ದಿನ ಸಂಬಂಧಪಟ್ಟವರಿಗೆ ಹೇಳಿ ಅಲ್ಲೆ ಏನೇನು ಆಗಿದೆ ಆಂಧ್ರಪ್ರದೇಶದವರು ಕಾನೂನು ವಿರುದ್ಧ ಅಥವಾ ಅಂತರ ರಾಜ್ಯ ಒಪ್ಪಂದಕ್ಕೆ ವಿರುದ್ಧ ಏನಾದರೂ ಕೆಲಸ ಮಾಡುತ್ತಿದ್ದರೆ ಏನು ಕ್ರಮಕ್ಕೆಗೊಳ್ಳುತ್ತೇವೆ ಎನ್ನುವುದನ್ನು ತಿಳಿಸುತ್ತೇವೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ದಿವಸ ಆದ ಅಪಘಾತದ ಬಗ್ಗೆ ಮಾತನಾಡುತ್ತಿದ್ದರು.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ದಿವಸ ಆದ ಅಪಘಾತದ ಬಗ್ಗೆ ಮಾತನಾಡುತ್ತಿದ್ದರು.

(ಗೊಂದಲ)

Sri H.N. Nanje Gowda : I want to caution the Government on this occation. ಶ್ರೀ ವಾಟಾಳ್ ನಾಗರಾಜ್‌ರವರು ಪ್ರಾಸಂಗಿಕವಾಗಿ ಎತ್ತಿದ್ದಾರೆ. ಅವರು ತುಂಬಾ ಗಂಭೀರವಾದಂತಹ ವಿಚಾರ ಎತ್ತಿದ್ದಾರೆ. ಕಾರಣ ಹೇಳುತ್ತೇನೆ. ಕರ್ನಾಟಕ ಜನಕ್ಕೆ ಉದ್ದಕ್ಕೂ ಅನುಭವಾಗಿದೆ. ತುಂಗಭದ್ರಾ ಹೈ ಲೆವೆಲ್ ಮಾನ್ಯ ನಿಜಲಿಂಗಪ್ಪನವರು ಬಗ್ಗೆ ಆಗ ಇಲ್ಲಿ ಮುಖ್ಯಮಂತ್ರಿಗಳಾಗಿದ್ದರು. ಗ್ರಹಚಾರಕ್ಕೆ ಮಾನ್ಯ ಸಂಜೀವರೆಡ್ಡಿಯವರು ಅಲ್ಲಿ ಮುಖ್ಯಮಂತ್ರಿಗಳು. ಅದು ಏನೋ ವಿಶ್ವಾಸ. ಇವರಿಬ್ಬರ ವಿಶ್ವಾಸಕ್ಕೆ ಕನ್ನಡ ನೆಲಕ್ಕೆ ನೀರು ಸಿಕ್ಕಲಿಲ್ಲ, ಅದರ ಬಗ್ಗೆ ವಿವರಗಳು ಬೇಕೆಂದರೆ ನಾನು ಹೇಳುತ್ತೇನೆ. ಅದು ಪ್ರಶ್ನೆಯಲ್ಲ, ಹಿಂದೆ ತೆಲುಗು ಗಂಗಾ ಪ್ರಾರಂಭವಾಯಿತು. ಇಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳು. ಅಲ್ಲಿ ಶ್ರೀ ಎನ್.ಟಿ.ಆರ್. ಅವರು ಮುಖ್ಯಮಂತ್ರಿಗಳು. ಅವರು ಅಣ್ಣನ ಪಾತ್ರ ವಹಿಸಿದರು, ಇವರು ಇಲ್ಲಿ ತಮ್ಮನ ಪಾತ್ರ ವಹಿಸಿದರು.

ಈಗ ಪುನಃ ಏನಾಗಿದೆ ಅಲ್ಲಿ ಎನ್.ಟಿ. ರಾಮರಾಮ್‌ರವರು ಬಂದಿದ್ದಾರೆ. ಇಲ್ಲಿ ದೇವೇಗೌಡರು ಬಂದಿದ್ದಾರೆ, ಅದು ಏನೋ ಈ ರಾಜಕೀಯ ಹೊಂದಾಣಿಕೆ ಕಾಕತಾಳಿಯವೇ ಆಗಿರಲಿ, ಒಂದು ರೀತಿಯ ವಿಶ್ವಾಸದ ಆಧಾರದ ಮೇಲೆ ಅವರೇನು ಮಾಡುತ್ತಾರೆ, ಅಣ್ಣನ ಪಾತ್ರವನ್ನು ವಹಿಸಿಕೊಂಡು ನಮ್ಮನ್ನು ಅಟ್ಟಿಸಿಕೊಂಡು ವ್ಯವಹಾರ ಮಾಡತಕ್ಕಂಥ ಮಟ್ಟಕ್ಕೆ ಇವೆಲ್ಲಾ ಆಗಿದೆ. ಅದರ ಡೀಟೆಲ್ ಬೇಕಾದರೆ, ನಾನು ಹೇಳಿಬಿಡುತ್ತೇನೆ; ಆದರೆ ಈಗ ಹೇಳುವುದಕ್ಕೆ ಹೋಗುವುದಿಲ್ಲ, ಈಗ ಆಗಿದ್ದು ಆಗಿಹೋಯಿತು. ಅದನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ, ಇನ್ನು ಮೇಲಾದರೂ ಕೂಡ we should place the interest of the state above the party and political affiliations. ಅಷ್ಟು ನಮಗೆ ಬೇಕು.

ಶ್ರೀ ಜೆ.ಹೆಚ್. ಪಟೇಲ್ : ನಾನು ಹೇಳಿದ್ದೇನೆ, ರಾಜಕೀಯ ಸಂಬಂಧಗಳು ಏನೇ ಇರಲಿ, ನಮ್ಮ ಸ್ನೇಹಿತರು ಯಾರೇ ಇರಲಿ, ಅಥವಾ ನಮ್ಮ ಅಣ್ಣ ತಮ್ಮಂದಿರೇ ಇರಲಿ ರಾಜ್ಯದ ಜನರ ಹಿತರಕ್ಷಣೆಯಲ್ಲಿ ಯಾವುದೇ ರಾಜೀ ಆಗುವುದಕ್ಕೆ ನಾವು ತಯಾರಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಈ ದಿವಸ ಆದ ರೈಲು ದುರ್ಘಟನೆ ಬಗ್ಗೆ ನಮ್ಮ ಮಾನ್ಯ ಸದಸ್ಯರು ಕಳಕಳಿ ವ್ಯಕ್ತಪಡಿಸಿದರು. ನಾನು ಪೋಲೀಸ್ ಕಮೀಷನರ್‌ರವರನ್ನು ಕಾಂಟಾಕ್ಟ್ ಮಾಡಿ ಇನ್‌ಫರ್‌ಮೇಷನ್ ತೆಗೆದುಕೊಂಡು ಬಂದಿದ್ದೇನೆ. I have received the following message from him.

"This morning at about 7.45 AM when the Udyan Express was arriving near Yelahanka, the engine went out of track and 5 bogies jammed and damaged. The rescue operations are in full swing with all the officers of the Department present there. The medical team is supervising the operation. So far, three bodies have been recovered by cutting the bogies. Some more deaths are suspected. Detailed message follows."

This is the message I have received from the office of the Police Commissioner, Bangalore.

ಗಮನ ಸೆಳೆಯುವ ಸೂಚನೆಗಳು

1. ರಾಜ್ಯದಲ್ಲಿ ಕೊಳಚೆ ಬಾವಿಗಳ ನೀರಿನಲ್ಲಿ ಪಾಷಣ ಏನಾದರೂ ಸೇರಿದರೆ ಪರೀಕ್ಷಿಸುವುದು

ಶ್ರೀಮತಿ ಪ್ರಮೀಳಾ ನೇಸರ್ಗಿ : ರಾಜ್ಯದಲ್ಲಿರುವ ಎಲ್ಲಾ ಕೊಳವೆ ಬಾವಿಗಳನ್ನು ಹಾಗೂ ಅಲ್ಲಿರುವ ನೀರಲ್ಲಿ ಪಾಷಣ ಏನಾದರೂ ಸೇರಿದೆಯೇ ಎಂಬುದನ್ನು ಕೂಡಲೇ ಪರೀಕ್ಷಿಸುವ ಅಗತ್ಯದ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಅಲ್ಲಿರುವ ಕೊಳವೆಬಾವಿಗಳಲ್ಲಿ ಕೊಳವೆಗಳು ತುಕ್ಕು ಹಿಡಿದಿರುವುದರಿಂದ ನೀರು ಕುಡಿಯಲಿಕ್ಕೆ ಅನಾರೋಗ್ಯಕರವಾಗಿದೆ ಎಂಬತಕ್ಕಂಥ ವಿಚಾರದ ಬಗ್ಗೆ ಅವರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಇಲ್ಲಿಯವರೆಗೂ ಕೂಡ ಇಂತಹ ಯಾವುದೇ ತರಹದ ಪ್ರಕರಣಗಳ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ, ಅಕಸ್ಮಾತ್ ಆ ರೀತಿಯ ನಿರ್ದಿಷ್ಟ ಪ್ರಕರಣಗಳು ಬಂದರೆ, ದಯವಿಟ್ಟು ಅದರ ಬಗ್ಗೆ ಮಾಹಿತಿ ಕೊಟ್ಟರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಸಭಾಧ್ಯಕ್ಷರೇ, ಈ ವಿಷಯವನ್ನು ವಿತಕ್ಕೋಸ್ಕರ ತಮ್ಮ ಗಮನಕ್ಕೆ ತಂದಿದ್ದೇನೆ ಎಂದರೆ, ಇವತ್ತು ಪಶ್ಚಿಮ ಬಂಗಾಲದಲ್ಲಿ ಮೂರು ಜಿಲ್ಲೆಗಳಲ್ಲಿ ಏನಾಗಿದೆ ಎಂಬುದು ಪ್ರಾಯಶಃ ನಮ್ಮ ಕರ್ನಾಟಕದಲ್ಲಿ ಇರತಕ್ಕಂಥ ಮಂತ್ರಿಗಳ ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ; ಆ ರಾಜ್ಯದ ಮೂರು ಜಿಲ್ಲೆಗಳಲ್ಲಿ ಕೊಳವೆ ಬಾವಿಗಳ ನೀರು ಹೆಚ್ಚು ಅನಾರೋಗ್ಯಕರವಾಗಿದ್ದು ನೀರಿನ ಪ್ರಮಾಣ ಹೆಚ್ಚಾಗಿ ಉಪಯೋಗಿಸುವಂತಹ ಸಂದರ್ಭದಲ್ಲಿ ಭೂಮಿಯ ಕೆಳಗೆ ಇರತಕ್ಕಂಥ ಅರ್‌ಸನಿಕ್ ಎಂಬ ಪಾಷಾಣ ಏನು ಇದೆ ಅದು ನೀರಿನ ಜೊತೆಯಲ್ಲಿ ಸೇರಿಕೊಂಡು ಇವತ್ತು ಮೂರು ಕೋಟಿ ಜನ ಪಶ್ಚಿಮ ಬಂಗಾಳದಲ್ಲಿ ಈ ಒಂದು ಅನಾರೋಗ್ಯಕ್ಕೆ ತುತ್ತಾಗಿದ್ದಾರೆ. ಹೀಗಾಗಿ ಕರ್ನಾಟಕದಲ್ಲಿರತಕ್ಕವರು ಅದರ ಬಗ್ಗೆ ಸೂಕ್ತವಾದ ಗಮನಕೊಡಬೇಕಾದ ಅವಶ್ಯಕತೆ ಹೆಚ್ಚಾಗಿದೆ. ಆದ್ದರಿಂದ ನಾನು ತಮ್ಮ ಗಮನ ಸೆಳೆಯುವುದೇನೆಂದರೆ, ಇಡೀ ಕರ್ನಾಟಕದಲ್ಲಿ ಇರತಕ್ಕಂಥ ಕೊಳವೆಬಾವಿಗಳ ನೀರನ್ನು ಪರೀಕ್ಷೆ ಮಾಡಿ ಆ ರೀತಿ ಏನಾದರೂ ಪಾಷಾಣದಲ್ಲಿ